**<u>ಸಾಕ್ಷಿಯನ್ನು ದಿಃ 02.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಎಸ್.ಎಂ ವಕೀಲರಿಂದಃ–</u>**

ನಾನು 9 ನೇ ತರಗತಿ ವರೆಗೆ ಓದಿರುತ್ತೇನೆ . ನನ್ನ ಹುಟ್ಟಿದ ದಿನಾಂಕ 26.03.1997 ಆಗಿದೆ. ನಾನು ಹುಟ್ಟುವ ಪೂರ್ವದಲ್ಲಿ ನಮ್ಮ ಮಾವ ಮಾಯಪ್ಪ ಬೋವಿ ರವರು ಮಾಡಿರುವ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಅದೆ ರೀತಿ ನಾನು ಹುಟ್ಟುವ ಪೂರ್ವದಲ್ಲಿ ಮಾವನ ಆಸ್ತಿಗಳ ವಿಚಾರ ಏನೆಲ್ಲಾ ಆಗಿದೆ ಎಂದು ಗೊತ್ತಿಲ್ಲ. ನಮ್ಮ ಮಾವ / ತಾತ ಮಾಯಪ್ಪ ಬೋವಿ ರವರಿಗೆ ಓದು ಬಹರ ಬರುತ್ತಿರಲಿಲ್ಲ. ಅದೆ ರೀತಿ ನಮ್ಮ ಅಜ್ಜಿ ಗಿರಿಯಪ್ಪ ರವರಿಗೂ ಓದು ಬಹರ ಬರುತ್ತಿರಲಿಲ್ಲ. ಇಬ್ಬರೂ ಯಾವುದೆ ದಾಖಲೆಗಾಗಲಿ ಹೆಬ್ಬಟ್ಟು ಗುರುತು ಹಾಕುತ್ತಿದ್ದರು ಎಂದರೆ ಸರಿ. ಸದರಿ ಒಟ್ಟು ಕುಟುಂಬದ ಯಾವುದೇ ದಾಖಲೆಗಳಿಗೆ ಸಹಿ ಮಾಡಿದರೆ ಹೆಬ್ಬಟ್ಟಿನ ಗುರುತು ಹಾಕುತ್ತಿದ್ದರು ಎಂದರೆ ಸರಿ.

8 ನೇ ಪ್ರತಿವಾದಿ ಮಹಾದೇವ ನನ್ನ ಗಂಡನಿದ್ದು, ಅವರು ಸೋದರ ಮಾವನಾಗಬೇಕು. ತಾತ ಮಾಯಪ್ಪ ಬೋವಿ ಮತ್ತು ಅಜ್ಜಿ ಗಿರಿಯಮ್ಮ 2003 ರ ಪೂರ್ವದಿಂಲೂ 4 ನೇ ಪ್ರತಿವಾದಿ ಜೊತೆ ಇದ್ದರು ಎಂದರೆ ಸರಿಯಲ್ಲ. ನಮ್ಮ ಅಜ್ಜಿ ಗಿರಿಯಮ್ಮ 2003 ರಿಂದಲೂ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಅದೆ ರೀತಿ 1 ನೇ ಪ್ರತಿವಾದಿ ಮಾಯಪ್ಪ ಬೋವಿ ರವರು ಕೂಡ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ವಾದಿಗೆ 1 ಎಕರೆ ಜಮೀನು ಕೊಟ್ಟಿರುತ್ತೇವೆ ಎಂದುಹೇಳಿದ್ದು, ಅದರಂತೆ ಕೊಟ್ಟಿರುತ್ತೇವೆ. ವಿಭಾಗ ಪತ್ರ ಮಾಡಿಕೊಂಡ ಬಗ್ಗೆ ದಾಖಲೆ ನೋಡಿರುತ್ತೇನೆ, ಅದನ್ನು ಹಾಜರು ಪಡಿಸಿರುತ್ತೇನೆ.

ನಿಡಿ. 22 ರ ವಿಲ್ ಪ್ರಮಾಣ ಪತ್ರದಲ್ಲಿ ನಮೂದಿರುಸಿರುವ ಆಸ್ತಿ 1 ನೇ ಪ್ರತಿವಾದಿಗೆ ಸಾಗುವಳಿ ಯಿಂದ ಬಂದಿರುತ್ತದೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಹಾಗೆ ಸಾಗುವಳಿ ಪಡೆಯಲು ಅರ್ಜಿಯನ್ನು ಯಾವ ವರ್ಷ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ದಿಃ 09.04.91 ರಂದು 1 ನೇ ಪ್ರತಿವಾದಿ ಸಾಗುವಳಿ ಅರ್ಜಿಯನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯಲ್ಲಿ ಏನೇಲ್ಲಾ ಬರೆದು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಅರ್ಜಿ ಕೊಡುವ ಸಮಯದಲ್ಲಿ ತಮ್ಮ ಕುಟುಂಬದಲ್ಲಿ ಎಷ್ಟು ಜನ ವಾಸವಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಿಪಿ. 62 ರ ಅರ್ಜಿಯಲ್ಲಿ 10 ಜನ ವಾಸ ಇದ್ದಾರೆ ಎಂದು ಬರೆದು ಹಾಕಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ 10 ಜನ ಎಂದರೆ ಅವರ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಅವರ ಜೊತೆ ವಾಸ ಇದ್ದರು ಎಂದರೆ ಸರಿಯಲ್ಲ, ಎಲ್ಲರೂ ಪ್ರತ್ಯೇಕವಾಗಿದ್ದರು. 1993 ರಲಿಃ ಬೇರೆ ಬೇರ ಇದ್ದರು ಎಂದು ನಮ್ಮ ತಾತ ನನಗೆ ಹೇಳಿದ್ದರು.

3 ನೇ ಪ್ರತಿವಾದಿ ಕೃಷ್ಣಾಬೋವಿ ನನಗೆ ಸೋದರ ಮಾವ. ನಾವು ಮತ್ತು ಅವರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿಯಲ್ಲ. ದಿಃ 12.04.2022 ರಂದು ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸುವ ಸಮಯದಲ್ಲಿ ನಿಡಿ. 22 ರ ವಿಲ್ ನಮ್ಮ ಬಳಿ ಇತ್ತು ಎಂದರೆ ಸರಿಯಲ್ಲ, ಅದು ನಮ್ಮ ತಾತನ ಬಳಿ ಇತ್ತು. ಸದರಿ ನಿಡಿ. 5 ರ ವಿಲ್ ಗೆ ಯಾರು ಸಾಕ್ಷಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ. 22 ರ ವಿಲ್ 3 ನೇ ಪ್ರತಿವಾದಿ ನಮ್ಮ ಸೋದರ ಮಾವ ಮತ್ತು ನಾವು ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ. ನಿಡಿ. 22 ರ ದಾಖಲೆಗೆ ಶೇಖರೇಗೌಡ ಮತ್ತು ಮಂಜುನಾಥ ಎಂಬುವವರು ಸಹಿ ಮಾಡಿರುತ್ತಾರೆ. ಅವರು ಯಾವ ಊರಿನವರು ಎಂದು ನನಗೆ ಗೊತಿತಲ್ಲ. ಅವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂರು ಸಾಕ್ಷಿ ನುಡಿಯಲು ಯಾವುದೆ ತೊಂದರೆ ಇಲ್ಲ ಎಂದರೆ ಅವರು ಇದ್ದರೆ ಕರೆದುಕೊಂಡು ಸಾಕ್ಷಿ ನುಡಿಸುತ್ತೇನೆ ಎನ್ನುತ್ತಾರೆ. ನಿಡಿ. 22 ರ

ದಾಖಲೆಯನ್ನು 6 ನೇ ಪ್ರತಿವಾದಿ ನನ್ನ ತಾಯಿ, ನಾನು, 8 ನೇ ಪ್ರತಿವಾದಿ ನನ್ನ ಗಂಡ ಮೂವರು ಸೇರಿ ಒಟ್ಟು ಕುಟುಂಬದ ಆಸ್ತಿ ಎಂದು ಗೊತ್ತಿದ್ದರೂ ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾತ ಮಾಯಪ್ಪ ಬೋವಿ ರವರಿಗೆ ಓದು ಬರಹ ಬರದಿದ್ದ ಕಾರಣ ಅದನ್ನು ಉಪಯೋಗಿಸಿಕೊಂಡು ವಿಲ್ ಅನ್ನು ನಾವು ಮೂರು ಜನ ದುರುಪಯೋಗ ಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ವಿಲ್ ನಲ್ಲಿ ಬರೆದಿರುವ ಆಸ್ತಿ ಒಟ್ಟು ಕುಟುಂಬದಿದ್ದು ಅದರಲ್ಲಿ ವಾದಿಯರಿಗೂ ಭಾಗಾಂಶ ಇರುತ್ತದೆ ಎಂದರೆ ಸರಿಯಲ್ಲ. ನಿಡಿ. 22 ರ ವಿಲ್ ಗೆ ಸಂಬಂದಧಿಸಿದಂತೆ ಖಾತೆ ಮಾಡಿಸಿಕೊಂಡಿದ್ದಿರಾ ಎಂದರೆ 3 ಮತ್ತು 4 ನೇ ಪ್ರತಿವಾದಿಗಳು ತಕರಾರು ಹಾಕಿದ್ದರಿಂದ ಖಾತೆ ಇನ್ನೂ ಆಗಿಲ್ಲ ಎನ್ನುತ್ತಾರೆ. ಸದರಿ ಕೇಸ್ ನಂ. 42/2022 ಆಗಿರುತ್ತದೆ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.